ಶ್ರೀ ಟಿ. ಚನ್ನಯ್ಯ.—ಪಬ್ಲಿಕ್‌ವರ್ಕ್ಸ್ ಡಿಪಾರ್ಟ್‌ಮೆಂಟಿನವರ ನ್ಯಾಯವಾಗಿ ವಿಲೇವಾರಿ ಮಾಡುತ್ತಾರೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಮುನಿಸಿಪಾಲಿಟಿಯವರು ಹೀಗೆ ಮಾಡಿದ ತಕ್ಷಣ, ಕಂಟ್ರಾಕ್ಟರು 20,000 ರೂಪಾಯಿಗಳ ನಷ್ಟವಾಗಿದೆಯೆಂದು ಸರ್ಕಾರಕ್ಕೆ ನೋಟೀಸ್ ಕೊಟ್ಟಿದ್ದಾರೆಯೇ ?

ಶ್ರೀ ಟಿ. ಚನ್ನಯ್ಯ.—ಕಾಂಪೆನ್‌ಸೇಷನ್ ಕೊಡಬೇಕೆಂದು ಕೇಳಿದ್ದಾರೆ.

ಶ್ರೀ ಎಂ. ಸಿ ಆಂಜನೇಯರೆಡ್ಡಿ.—ಕಂಟ್ರಾಕ್ಟರು materials ಎಲ್ಲವನ್ನು ಶೇಖರಣೆ ಮಾಡಿದ್ದಾರೆಂದು ತಿಳಿದು ಡೆಪ್ಯುಟಿ ಕಮಿಷನರು ಎಷ್ಟು ಕಾಂಪೆನ್‌ಸೇಷನ್ ಕೊಡಬೇಕಾಗುತ್ತದೆ, underground drainage ತೆಗೆದುಕೊಂಡರೆ, ಎಂದು ರಿಪೋರ್ಟ್ ಕಳುಹಿಸಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ಅದು ಸರ್ಕಾರಕ್ಕೆ ಬಂದಿಲ್ಲ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಹಾಗಾದರೆ ಕೆಲಸ ನಿಲ್ಲಿಸಬೇಕೆಂದು ಹೇಗೆ ಆರ್ಡರ್ ಮಾಡಿದಿರಿ ?

ಶ್ರೀ ಟಿ. ಚನ್ನಯ್ಯ.—ಮುನಿಸಿಪಾಲಿಟಿಯವರು ಸಫೇರ್ಸ್ ಡ್ರೇನೇಜ್ ಬೇಡ, underground drainage ಮಾಡಿಸಿಕೊಡಬೇಕೆಂದು ಕೇಳಿದ್ದಾರೆ. ಅದರಮೇಲೆ ಕಾರ್ಯಕ್ರಮ ತೆಗೆದುಕೊಳ್ಳಲಾಗಿದೆ.

ಶ್ರೀ ಎಂ.ಸಿ. ಆಂಜನೇಯರೆಡ್ಡಿ.—Underground drainageಗೆ ಎಸ್ಟಿಮೇಟ್ ಆಗಿದೆಯೇ ?

ಶ್ರೀ ಟಿ. ಚನ್ನಯ್ಯ.—ಈಗ ಎಷ್ಟು ಹಣ ಕೊಟ್ಟಿದೆಯೋ ಅದರಲ್ಲಿ ಉಳಿದ ಹಣದಲ್ಲಿ underground drainage ಮಾಡಿಸುವುದಕ್ಕೆ ಸಾಧ್ಯವಿದೆಯೇ ಅಥವಾ ಇಲ್ಲವೇ ಎಂಬ ವಿಷಯವನ್ನು ಪರಿಶೀಲಿಸಿ, ರಿಪೋರ್ಟ್‌ಗಳು ಕಳುಹಿಸಿಕೊಡಬೇಕೆಂದು ಡೆಪ್ಯುಟಿ ಕಮಿಷನರನ್ನು ಕೇಳಿದ್ದೇವೆ. ಅದಿನ್ನೂ ನಮಗೆ ಬಂದಿಲ್ಲ.

ಶ್ರೀ ಎಂ ಸಿ. ಆಂಜನೇಯರೆಡ್ಡಿ.—40,000 ರೂಪಾಯಿಗಳು ಖರ್ಚಾಗಿ 20,000 ರೂಪಾಯಿಗಳು ಮಾತ್ರ ಉಳಿದಿವೆ. ಇಷ್ಟು ಹಣ underground drainageಗೆ ಸಾಕಾಗುತ್ತದೆಯೇ ?

ಶ್ರೀ ಟಿ. ಚನ್ನಯ್ಯ. ಪೂರ್ತಿ 40,000 ರೂಪಾಯಿಗಳು ಖರ್ಚಾಗಿಲ್ಲ. ಬಾಕಿ ಹಣದಿಂದ ಮಾಡುವುದಕ್ಕೆ ಸಾಧ್ಯವೇ ಇಲ್ಲ ? ಎಂಬುದನ್ನು ಎಸ್ಟಿಮೇಟ್ ಬಂದ ಮೇಲೆ ಯೋಚನೆ ಮಾಡುತ್ತೇವೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಈ ರೀತಿ ಮಾಡಿರುವುದರಿಂದ ಕಂಟ್ರಾಕ್ಟರಿಗೆ ತುಂಬ ನಷ್ಟವಾಗುತ್ತದೆಂದು ಗೊತ್ತಿದೆಯೇ ?

ಶ್ರೀ ಟಿ. ಚನ್ನಯ್ಯ.—ನಷ್ಟವೇನೋ ಆಗುತ್ತದೆ. ಆದರೆ ಮುನಿಸಿಪಾಲಿಟಿಯವರು surface drainage ಬೇಡವೆ(ಬೇಡ, under ground drainage ಮಾಡಬೇಕೆಂದು ಹೇಳಿದ್ದಾರೆ. 5,000 ರೂಪಾಯಿಗಳ ಸಾಮಾನುಗಳನ್ನು ಶೇಖರಿಸಿದ್ದಾರೆಂದು ತಿಳಿಸಿದ್ದಾರೆ ಇದಕ್ಕೆ ಎಷ್ಟು ಕಾಂಪೆನ್‌ಸೇಷನ್ ಕೊಡಬೇಕು ಮುಂತಾದ ಎಲ್ಲಾ ವಿಷಯಗಳನ್ನೂ ಪರ್ಯಾಲೋಚನೆ ಮಾಡಿ ಡೆಪ್ಯುಟಿ ಕಮಿಷನರು ವರದಿ ಕಳುಹಿಸಬೇಕೆಂದಿದೆ. ಇನ್ನೂ ಅವರಿಂದ ವರದಿ ಬಂದಿಲ್ಲ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಈ ಮಧ್ಯೆ ಇಷ್ಟು ದಿವಸಗಳು ಕಳೆದುಹೋದರೆ ಸಾವಿರಾರು ರೂಪಾಯಿಗಳನ್ನು ಕೆಲಸಕ್ಕೆ ಡಿಪಾಜಿಟ್ ಮಾಡಿ 500–600 ಮೊಚೆ ಸೀಮೆಂಟ್ ಕೂಡಿಹಾಕಿಕೊಂಡು ಮೂರು ತಿಂಗಳು ಕಾಲ ಹೀಗೆ ಕೆಲಸ ನಿಲ್ಲಿಸಿದ್ದರೆ ಕಂಟ್ರಾಕ್ಟರಿಗೆ ವಿಪರೀತ ನಷ್ಟವಲ್ಲವೇ ?

ಶ್ರೀ ಟಿ. ಚನ್ನಯ್ಯ.—ಜಾಗ್ರತೆ ಡೆಪ್ಯುಟೀ ಕಮಿಷನರ್‌ರವರನ್ನು ರಿಪೋರ್ಟ್ ಕಳುಹಿಸಿಕೊಡಿ ಎಂದು ಹೇಳಿದ್ದೇವೆ. ಇನ್ನು ಅದು ಬಂದಿಲ್ಲ. Reminder ಕಳುಹಿಸಿ. ಬೇಗ ಕಳುಹಿಸಿಕೊಡಬೇಕೆಂದು ಹೇಳುತ್ತೇವೆ. ಬಂದನಂತರ ಏರ್ಪಾಡುಮಾಡುತ್ತೇವೆ.

Grant of lands to Political Sufferers.

Q.—319. Sri G. BASAPPA (Hosadurga).—

Will the Government be pleased to state :—

(*a*) in how many cases lands have been granted to the political sufferers in the State ;

(*b*) whether there are any conditions imposed while granting lands ;

(*c*) how many have sold these lands already ?

A.—Sri KADIDAL MANJAPPA (Minister for Revenue and Public Works).—

(*a*) 94.
(*b*) No conditions imposed.
(*c*) No such cases.

12-30 P.M.

ಶ್ರೀ ಜಿ. ಬಸಪ್ಪ.—ರಾಜಕೀಯ ಹೋರಾಟದಲ್ಲಿ ನೊಂದವರಿಗೆ ಜಮೀನು ಯಾವ ಉದ್ದೇಶದಿಂದ ಕೊಡುವುದು ?

Mr. SPEAKER.—It is understood. The Hon'ble Member may put any other question.

ಶ್ರೀ ಜಿ. ಬಸಪ್ಪ.—ಬೇರೆ ಇತರರಿಗೆ ಜಮೀನು ಕೊಡುವಾಗ ಏನಾದರೂ ಷರತ್ತುಗಳನ್ನು ಹಾಕುವುದುಂಟೆ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಸಂದರ್ಭಗಳಲ್ಲಿ ಹಾಕುತ್ತೇವೆ.

ಶ್ರೀ ಜಿ. ಬಸಪ್ಪ.—ಯಾವ ಉದ್ದೇಶದಿಂದ ಜಮೀನು ಕೊಟ್ಟರೋ ಆ ಉದ್ದೇಶ ಸಫಲವಾಗುತ್ತಿಲ್ಲವೆಂಬುದೂ, ಜಮೀನುಗಳು ಪರಾಧೀನವಾಗುತ್ತಿರುವುದೂ ಗೊತ್ತಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನಮ್ಮ ಗಮನಕ್ಕೆ ಯಾವುದೂ ಬಂದಿಲ್ಲ ಆರೀತಿ ಪರಾಧೀನವಾಗುತ್ತಿರುವುದು.

ಶ್ರೀ ಜಿ. ಬಸಪ್ಪ.—ಹಾಗೆ ಬಂದರೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಕಾನೂನಿನ ಪ್ರಕಾರ ಅವಕಾಶವಿದ್ದರೆ ತೆಗೆದುಕೊಳ್ಳುತ್ತೇವೆ.

ಶ್ರೀ ಜಿ. ಬಸಪ್ಪ.—ತಾವು ಯಾವ ನಿರ್ಬಂಧವನ್ನೂ ಹಾಕದೇಯಿರುವಾಗ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶವಿರುತ್ತದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಕಾನೂನಿಗೆ ಸಂಬಂಧಪಟ್ಟ ಪ್ರಶ್ನೆ ; ಯೋಚನೆ ಮಾಡುತ್ತೇವೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಚಿತ್ರದುರ್ಗ ಜಿಲ್ಲೆಯಲ್ಲಿ ಎಷ್ಟು ಕೊಟ್ಟಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—25.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಎಷ್ಟೇಕರೆ ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿವರಗಳು ಈಗ ನನ್ನಲ್ಲಿಲ್ಲ. ಮೊದಲೇ ಕೇಳಿದ್ದಿದ್ದರೆ, ಡೆಪ್ಯುಟಿ ಕಮೀಷನರಿಗೆ ಬರೆದು ತರಿಸಬಹುದಾಗಿತ್ತು.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಒಬ್ಬರಿಗೇ ಎರಡು ಸಾರಿ ಜಮೀನು ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಪೊಲಿಟಿಕಲ್ ಸಫರರ್ಸ್ ಎಂಬುದರಲ್ಲಿ ಯುದ್ಧದಲ್ಲಿ ಸತ್ತವರೂ ಸೇರುತ್ತಾರೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ, ಅವರು political sufferers ಅಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಅವರಿಗೆ ಹೇಗೆ ಕೊಡುತ್ತೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೆ ಬೇರೆ ನಿಯಮಗಳಿವೆ, ಅದರ ಪ್ರಕಾರ ಕೊಡುತ್ತೇವೆ.

Sri M. CHIKKALINGIAH.—Political sufferer ಎಂದರೆ definition ಏನು ?

Mr. SPEAKER.—The definition of political sufferer is given in the circular.

ಶ್ರೀ ಪಿ. ಮಸಿಯಪ್ಪ.—ಸ್ವಾತಂತ್ರ್ಯ ಹೋರಾಟದಲ್ಲಿ ಮರಣಹೊಂದಿದ ಮೈಸೂರಿನ ವಿದ್ಯಾರ್ಥಿ ರಾಮಸ್ವಾಮಿ ಎಂಬವರ ಮನೆಯವರಿಗೆ ಏನು ಪರಿಹಾರ ಕೊಟ್ಟಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಎಸ್. ಗೋಪಾಲಗೌಡ.—ಈಗಲಾದರೂ ಮನವಿಮಾಡಿಕೊಂಡರೆ ಅವರಿಗೆ ಪರಿಹಾರ ಕೊಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ನೋಡೋಣ.

ಶ್ರೀ ಎಸ್. ಗೋಪಾಲಗೌಡ.—ಸಂಸ್ಥಾನದಲ್ಲಿ ಒಟ್ಟು ಎಷ್ಟು ಅರ್ಜಿಗಳು ಬಂದವು ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಈಗ ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಭೂಮಿಯನ್ನು ಕೊಡುವಾಗ ಅನುಕೂಲವಿದ್ದವರಿಗೂ ಕೊಟ್ಟಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಎಸ್. ಗೋಪಾಲಗೌಡ.—ಹಾಗೆ ಕೊಟ್ಟಿದ್ದರೆ?

Sri KADIDAL MANJAPPA.—It is Hypothetical.

ಶ್ರೀ ಪಿ. ಆರ್. ರಾಮಯ್ಯ.—ಪೊಲಿಟಿಕಲ್ ಸಫರರ್ಸ್‌ಗೆ ಯಾವ ಯಾವ ರಿಯಾಯಿತಿಗಳನ್ನು ಕೊಡಬೇಕೆಂದು ಸರ್ಕಾರದವರು ಆಲೋಚನೆ ಮಾಡಿದ್ದಾರೆ?

ಶ್ರೀ ಕಡಿದಾಳ್ ಮಂಜಪ್ಪ.—ತಾವು ಕೇಳುವುದು ರಿಯಾಯಿತಿಗಳೆ ?

ಶ್ರೀ ಪಿ. ಆರ್. ರಾಮಯ್ಯ.—ಯಾವ ಯಾವ ಸೌಲಭ್ಯಗಳನ್ನು ಕೊಡುತ್ತೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಜಮೀನು ಕೊಡಲಾಗುತ್ತಿದೆ; ಕೆಲವು ಸಂದರ್ಭಗಳಲ್ಲಿ ದ್ರವ್ಯರೂಪದಲ್ಲಿ ಕೂಡ ಕೊಟ್ಟಿದ್ದಾರೆ.

ಶ್ರೀ ಪಿ. ಆರ್. ರಾಮಯ್ಯ.—ನಗರಗಳಲ್ಲಿ ನಿವೇಶನಗಳನ್ನು ಕೊಡುವುದಕ್ಕಾಗುತ್ತದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಪೌರಸಭೆಗೆ ಸಂಬಂಧಪಟ್ಟದ್ದು, ನಾವು ಹೇಳುವುದಕ್ಕಾಗುವುದಿಲ್ಲ.

ಶ್ರೀ ಪಿ. ಆರ್. ರಾಮಯ್ಯ.—ಶಿಫಾರಸು ಮಾಡುವುದಕ್ಕಾಗುತ್ತದೆಯೆ ? ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಸರ್ಕಾರಕ್ಕೆ ಸೇರಿದ್ದು, ಅದರಲ್ಲಿ ಕೊಡುವುದಕ್ಕಾಗುತ್ತದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಪರಿಶೀಲನೆ ಮಾಡುತ್ತೇವೆ.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಪರಿಹಾರ ಕೊಡುವುದು ನೊಂದವರೊಬ್ಬರಿಗೆ ಮಾತ್ರ ಅನ್ವಯಿಸುತ್ತದೆಯೋ ಅಥವಾ ಅವರ ಸಂಸಾರದವರಿಗೂ ಅನ್ವಯಿಸುತ್ತದೆಯೋ ?

ಶ್ರೀ ಕಡಿದಾಳ್ ಮಂಜಪ್ಪ.— ಸಂಸಾರದವರಿಗೂ ಅನ್ವಯಿಸುತ್ತದೆ.

ಶ್ರೀ ಬಿ. ರಾಚಯ್ಯ.—ಪೊಲಿಟಿಕಲ್ ಸಫರರ್ಸಿಗೆ ಸರ್ಕಾರಿ ನೌಕರಿಯಲ್ಲಿ ಅವಕಾಶ ಕೊಡುತ್ತಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಖಾಲಿ ಇದ್ದರೆ, ಅವರಿಗೆ ಅದಕ್ಕೆ ತಕ್ಕ ಅರ್ಹತೆಯಿದ್ದರೆ ಕೊಡಬಹುದು.

ಶ್ರೀ ವಿ. ಆರ್. ನಾಯ್ಡು.—ಜಮೀನು ಕೊಡಬೇಕೆಂದು ಪ್ರಜಾ ಸೋಷಿಯಲಿಸ್ಟ್ ಪಕ್ಷದವರೂ ಅರ್ಜಿ ಹಾಕಿದ್ದಾರೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲರೂ ಹಾಕಿರಬಹುದು ; ನೋಟೀಸ್ ಬೇಕು.

ಶ್ರೀ ಜಿ. ಶಿವಪ್ಪ. ಜಮೀನು ಕೊಡುವುದರಲ್ಲಿ ಒಂದು ನೀತಿಯನ್ನನುಸರಿಸಿ ಕೊಡುತ್ತಿದ್ದೀರೊ ಅಥವಾ ನಮ್ಮನೆ ಅರ್ಜಿ ಹಾಕಿದ್ದನ್ನು ನೋಡಿಕೊಡುತ್ತಿದ್ದೀರೋ ?

ಶ್ರೀ ಕಡಿದಾಳ್ ಮಂಜಪ್ಪ.—24-12-1951ರ ಸರ್ಕಾರಿ ಆಜ್ಞೆಯಿದೆ ಅದರ ಪ್ರಕಾರ ಕೊಡುತ್ತಿದ್ದೇವೆ.

ಶ್ರೀ ಜಿ. ಶಿವಪ್ಪ.—ಅನೇಕರು ಜಮೀನಿರುವ ಸ್ಥಳದಲ್ಲಿಲ್ಲದೆ ಟೌನ್‌ಗಳಲ್ಲಿ ವಾಸಮಾಡುತ್ತಿರುವವರಿಗೂ ಕೊಡುತ್ತಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಟಿ. ಸಿ. ಬಸಪ್ಪ.—ಜಮೀನಿಗಾಗಿ ಅರ್ಜಿಹಾಕಿ ಇನ್ನೂ ಜಮೀನು ಕೊಡದೇ ಇರುವ ಅರ್ಜಿಗಳು ಎಷ್ಟು, 'ಪೆಂಡಿಂಗ್' ಆಗಿವೆ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಟಿ. ಸಿ. ಬಸಪ್ಪ.—ಆ ಅರ್ಜಿಗಳನ್ನು ಜಾಗ್ರತೆ ತೀರ್ವಾನ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅದಷ್ಟು ಜಾಗ್ರತೆ ಮಾಡಬೇಕೆಂದು ಜಿಲ್ಲಾಧಿಕಾರಿಗಳಿಗೆ ಹೇಳಿದ್ದೇವೆ.

ಶ್ರೀ ಎಸ್. ಆರ್. ನಾಗಪ್ಪ ಶೆಟ್ಟಿ.—ದ್ರವ್ಯ ಸಹಾಯ ಮಾಡಿರುವುದು ಪ್ರಾಣಹಾನಿ ಮತ್ತು ಆಸ್ತಿಪಾಸ್ತಿ ನಷ್ಟವಾಗಿರುವ ಸಂದರ್ಭಗಳಲ್ಲಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.